doc-409
T.P-2

(1)

R. No. KRNN 12 ಶ್ರೀ 30 - 11 - 1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Dail
Mysore 4
– For Influential Publicity

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾಪನಾನಿರತ ಎಂ. ಎಸ್. ಕೃಷ್ಣರಾವ್ [3 ಪೈ.

ಸಿಂಹಳ ಅಧ್ಯಕ್ಷರ ವಜಾಕ್ಕೆ ಕೇಳಿಕೆ

ಕಾಗದದ ನಿಧಿ

ನವದೆಹಲಿ— ಒಂದು ಕಾಗದದ ನಿಧಿ ಸ್ಥಾಪಿಸಲು ಯುಎನ್‌ಎಸ್ಕೋ ಒಂದು ಸಮಿತಿಯನ್ನು ಸ್ಥಾಪಿಸುವ ನಿರೀಕ್ಷೆ ಇದೆ

ಕರ್ನಾಟಕ ಸರ್ಕಾರ

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿ,
ಕಬಿನಿ ಜಲಾಶಯ ವಿಭಾಗ,
ಕಬಿನಿ ಕಾಲೋನಿ, ಠಜ್. ಡಿ. ಕೋಟೆ ತಾಲ್ಲೂಕು

3 ನೇ ಕಾಲ್

ಟೆಂಡರ್ ಪ್ರಕಟಣೆ

ನಂ II/74-75 ತಾ. 11-11-1974

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕೆಲಸದ ಹೆಸರು ಬರೆದ ಪ್ರತ್ಯೇಕ ಮೊಹರಾದ ಶೇಕಡಾವಾರು ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ 3 ಮತ್ತು ಮೇಲ್ಪಟ್ಟ ವರ್ಗದ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ಕಬಿನಿ ಕಾಲೋನಿಯಲ್ಲಿರುವ, ಕಬಿನಿ ಜಲಾಶಯ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಆಹ್ವಾನಿಸಲ್ಪಟ್ಟಿದೆ.

ಕಚೇರಿ ಕೆಲಸದ ವೇಳೆಗಳಲ್ಲಿ ಪ್ರತಿ ಏಟಂ ಕೆಲಸಕ್ಕೆ ರೂ. 5 ಪಾವತಿ ಮಾಡಿದಲ್ಲಿ 2-12-74 ರಿಂದ 4-12-74 ರ ವರೆಗೆ (ಎರಡು ದಿನಗಳು ಸೇರಿ) ಅಪೇಕ್ಷಿಸುವ ಟೆಂಡರ್‌ದಾರರಿಗೆ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು ಮತ್ತು ವಿಭಾಗ ಕಚೇರಿಯಲ್ಲಿ 6-12-74 ರ ಮಧ್ಯಾಹ್ನ 4 ಗಂಟೆ ವರೆಗೆ ಮೊಹರಾದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮತ್ತು ಅವನ್ನು ಹಾಜರಿರುವ ಕಂಟ್ರಾಕ್ಟರ್‌ಗಳವರ ಮುಂದೆ ಅದೇ ದಿನ ಅಥವಾ ಮತ್ತೊಮ್ಮೆ ಯಾದರೂ ಅನುಕೂಲವಾದ ತಾರೀಖಿನಲ್ಲಿ ಒಡೆಯಲಾಗುವುದು

ಅಂಚೆಯ ಮೂಲಕ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕಳುಹಿಸಬೇಕಾದಲ್ಲಿ ಅಂಚೆಯ ವೆಚ್ಚಕ್ಕಾಗಿ ಹೆಚ್ಚುವರಿ ಹಣ ರೂ 5 ಚಾರ್ಜ್ ಮಾಡಲಾಗುವುದು. ಕೆಲಸ ಮುಗಿಸಲು ಕಾಲಾವಧಿ 12 ತಿಂಗಳು

ಕೆಲಸದ ಎಲ್ಲಾ ದಿನಗಳಲ್ಲಿ ಕಚೇರಿ ವೇಳೆಗಳಲ್ಲಿ ವಿಭಾಗ ಕಚೇರಿಯಲ್ಲಿ ಇತರ ವಿವರಗಳನ್ನು ಪಡೆಯಬಹುದು.

ಸೀ ನಂ	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟಿರುವ ಹಣ ರೂ	ಅರ್ನೆಸ್ಟ್ ಹಣ ಠೇವಣಿ ರೂ
1	ತಾರಕ ಕಾಲುವೆ ಶಬ್ ಡಿವಿಜ್ ಫ್ಯಾಫ್ ಗಾಗಿ ಹೆಚ್ ಡಿ ಕೋಟೆಯಲ್ಲಿ ಆಫೀಸಿಯಲ್ ಕ್ವಾರ್ಟರ್ಸ್ ನಿರ್ಮಿಸುವುದು (ಬ್ಲಾಕ್ 1)	39,856	1,000
2	ತಾರಕ ಕಾಲುವೆ ಶಬ್ ಡಿವಿಜ್ ಫ್ಯಾಫ್ ಗಾಗಿ ಹೆಚ್ ಡಿ ಕೋಟೆಯಲ್ಲಿ ಆಫೀಸಿಯಲ್ ಕ್ವಾರ್ಟರ್ಸ್ ನಿರ್ಮಿಸುವುದು (ಬ್ಲಾಕ್ 2)	39,856	1,000

ಸಹಿ/- ಎ ಪಾಪಣ್ಣ, ಎಕ್ಸಿಕ್ಯುಟೀವ್ ಇಂಜಿನಿಯರ್

ಕಾಗದದ ದಾಸ್ತಾನು ತಿಳಿಸಬೇಕು

ನವದೆಹಲಿ- ಸೂಕ್ತವಾದ ಮಟ್ಟಕ್ಕಿಂತ ಹೆಚ್ಚು ಕಾಗದ ದಾಸ್ತಾನು ಮಾಡದಂತೆ ಕಾಗದ ಕಾರ್ಖಾನೆಗಳಿಗೆ ಸಾಲ ಸೌಕರ್ಯ ನಿಲ್ಲಿಸಲಾಗುವುದೆಂದೂ, ಕಾಗದ ಕಾರ್ಖಾನೆಗಳು ತಮ್ಮ ದಾಸ್ತಾನಿನ ಲೆಕ್ಕ ಕೂಡಲೇ ಕೊಡಬೇಕೆಂದೂ ಕೈಗಾರಿಕೆ ಸಚಿವಾಲಯ ತಿಳಿಸಿದೆ.

ಆಟೋರಿಕ್ಷಾ ಮೆರವಣಿಗೆ

ಬೆಂಗಳೂರು— ಡಿಸೆಂಬರು 3 ರಂದು ಕೆಲವು ಗಂಟೆಗಳ ಕಾಲ ಆಟೋರಿಕ್ಷಾ ಓಡಾಟವಿರದೆ. ಅಂದು ತಮ್ಮ ಕೇಳಿಕೆ ಒತ್ತಾಯಕ್ಕಾಗಿ ಮೆರವಣಿಗೆ ನಡೆಸಲಾಗುವುದು.

ಧರ್ಮಚಕ್ರ ಶ್ರೀವಿಹಾರ

ಹಾಸನ– ಶ್ರವಣಬೆಳಗೊಳ ಜೈನ ಮಠದ ಶ್ರೀ ಚಾರುಕೀರ್ತಿ ಭಟ್ಟಾರಕರ ಸ್ವಾಮಿಗಳವರು ಧರ್ಮಚಕ್ರ ಶ್ರೀವಿಹಾರದ ವಿವರದ ವಿವರವನ್ನು ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು – ಶ್ರೀ ಮಹಾವೀರರ 2500 ನೇ ನಿರ್ವಾಣ ಮಹೋತ್ಸವ ಸಂಬಂಧದಲ್ಲಿ ಧರ್ಮಚಕ್ರಗಳು ದೇಶದ ನಾಲ್ಕು ಕಡೆಗಳಿಂದ ಹೊರಡುವವೆಂದೂ, ಒಂದು ಡೆಲ್ಲಿಯಿಂದ, ಒಂದು ಅಸ್ಸಾಮಿನಿಂದ, ಒಂದು ಇಂದೂರಿನಿಂದ, ಒಂದು ಶ್ರವಣಬೆಳಗೊಳದಿಂದ ಹೊರಟು ದೇಶಾದ್ಯಂತ ಒಂದು ಪ್ರವಾಸಮಾಡಿ ಕಡೆಗೆ ಶ್ರೀ ಮಹಾವೀರರು ನಿರ್ವಾಣ ಹೊಂದಿದ ಪಾವಾಪುರದಲ್ಲಿ ಸೇರುವವೆಂದೂ, ಜೊತೆಯಲ್ಲಿ ಜೈನ ವಿದ್ವಾಂಸರುಗಳು ಇದ್ದು ಜೈನ ಧರ್ಮ ಬೋಧಿಸುವರೆಂದೂ ತಿಳಿಸಿದರು.

●

ವಿವಾಹವಿಚ್ಛೇದನೆ

ಇಟಲಿಯಲ್ಲಿ ವಿವಾಹವಿಚ್ಛೇದನೆ ಹೆಚ್ಚುತ್ತಿದೆ; ಈ ವರ್ಷದ ಪ್ರಥಮ 6 ತಿಂಗಳಲ್ಲಿ 12600 ವಿವಾಹವಿಚ್ಛೇದನಗಳಾದವು

ಅಧ್ಯಕ್ಷರ ವಜಾ ಕೇಳಿಕೆ

ಕೊಲಂಬೊ– ಶ್ರೀಲಂಕಾ ಗಣರಾಜ್ಯದ ಅಧ್ಯಕ್ಷರಿಂದ ಯಾವ ಉಪಯುಕ್ತ ಕಾರ್ಯಗಳು ನಡೆಯುತ್ತಿಲ್ಲವಾಗಿ, ಆ ಹುದ್ದೆಯನ್ನು ವಜಾ ಮಾಡಬೇಕೆಂದು ರಾಷ್ಟ್ರೀಯ ಸಭೆಯಲ್ಲಿ ವಿರೋಧ ಪಕ್ಷಗಳು ಕೇಳಿಕೆ ಹಾಕಿದವು.

★

ಕಾವೇರಿ ಕಣಿವೆ ಸಂಸ್ಥೆ

ನವದೆಹಲಿ— ಕಾವೇರಿ ನೀರನ್ನು ಸಮರ್ಪಕವಾಗಿ ಮಿತವ್ಯಯವಾಗಿ ಉಪಯೋಗಿಸಿಕೊಳ್ಳಲು, ತಮಿಳುನಾಡು, ಕರ್ನಾಟಕ ಮತ್ತು ಕೇರಳ ಮುಖ್ಯ ಮಂತ್ರಿಗಳು ಕಾವೇರಿ ಕಣಿವೆ ಸಂಸ್ಥೆ ಸ್ಥಾಪನೆಗೆ ಒಪ್ಪಿಗೆ ನೀಡಿದರು

★

ಜೆ ಪಿ ಸಂಬಂಧದಲ್ಲಿ ಆರೋಪ

ನವದೆಹಲಿ— ಜಯಪ್ರಕಾಶರ ಚಳವಳಿಗೆ ಅಮೆರಿಕಾ ಮತ್ತು ಸಿಐಎ ಬೆಂಬಲ ದೊರೆಯುತ್ತಿದೆಯೆಂದು 21 ಮಂದಿ ಕಾಂಗ್ರೆಸ್ಸಿಗರು ಆಪಾದಿಸಿದ್ದಾರೆ.

★

ಅಂತರರಾಜ್ಯ ಜಗಳಗಳಿಂದ

ನವದೆಹಲಿ— ಅಂತರರಾಜ್ಯಗಳ ಜಗಳಗಳಿಂದ, ಕರ್ನಾಟಕದ 12 ಪ್ರಾಜೆಕ್ಟುಗಳಿಗೆ ಕೇಂದ್ರದ ನೀರು ಮತ್ತು ವಿದ್ಯುಚ್ಛಕ್ತಿ ಕಮಿಷನ್ನಿನ ಅನುಮತಿ ದೊರೆತಿಲ್ಲ.

★

ವಿಶ್ವವ್ಯಾಪಿ ಗಣಪತಿಗಳ ಪ್ರದರ್ಶನ

ಮೈಸೂರು— ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಾಳೆಯಿಂದ 3 ದಿನಗಳು, ಶಿವಮೊಗ್ಗಾ ತಾಲ್ಲೂ ಸಾಗರದ ಶ್ರೀ ಗೋವರ್ಧನ ಅಂಕೊಲೇಕರರು ಸಂಗ್ರಹಿಸಿರುವ ವಿಶ್ವವ್ಯಾಪಿ ಗಣಪತಿಗಳ ಶ್ರೀಗಂಧದಲ್ಲಿ ಸುಂದರವಾಗಿಕೆತ್ತಿರುವ ವಿವಿಧನಮೂನೆ ಗಣಪತಿಗಳ ಪ್ರದರ್ಶನ ಏರ್ಪಡಿಸಲಾಗಿದೆ.

(2)

ಪಾಶ್ಚಾತ್ಯ ಸಮಾಜದ ಸ್ವಾರ್ಥಪರ ದುರಾಶೆ

19 ನೇ ಶತಮಾನದ ಪ್ರಾರಂಭದಲ್ಲಿ ಕೈಗಾರಿಕಾ ಕ್ರಾಂತಿ ಇನ್ನೂ ಶೈಶವಾವಸ್ಥೆಯಲ್ಲಿದ್ದಾಗ, ಪ್ರಖ್ಯಾತ ಲೇಖಕ ಗೋಥೆ, ತನ್ನ ಕಾವ್ಯವ್ಯಕ್ತಿ ಫೌಸ್ಟ್ ಮೂಲಕ ಎಚ್ಚರಿಕೆ ನೀಡಿದನು. ಶಕ್ತಿಯುತ ಉನ್ನತ ಹುರುಪಿನ ಸೈತಾನನು, ಫೌಸ್ಟ್‌ಗೆ ಅತನ ಆತ್ಮದ ಬದಲಾಗಿ ಅತನು ಇಚ್ಛಿಸಿದಷ್ಟು ಐಶ್ವರ್ಯ ಮತ್ತು ಎಲ್ಲರ ಮೇಲೂ ಪ್ರಭಾವ ಬೀರುವ ಅಧಿಕಾರ, ವಿಶ್ವವಿಖ್ಯಾತ ವಿಶಾಲವಾದ ಖ್ಯಾತಿ ದೊರಕಿಸುವುದಾಗಿಯೂ, ಇವೆಲ್ಲಕ್ಕೂ ಬದಲಾಗಿ ಫೌಸ್ಟ್‌ನ ಆತ್ಮವನ್ನು ಸೈತಾನನು ಇಚ್ಛಿಸಿದನು.

ಆಗ 19 ನೇ ಶತಮಾನ ಪ್ರಾರಂಭ. ಗೋಥೆಯರ ಫೌಸ್ಟ್‌ನ ಉತ್ತರ—

ನೆಮ್ಮದಿ, ಸುಖ, ಆನಂದ— ಬೇಡ, ಬೇಡ ; ಇವೊಂದೂ ಬೇಡ ; ನನಗಾಗಿ ನಾನು ಅವುಗಳನ್ನು ಬಯಸುವುದಿಲ್ಲ ; ನಾನು ಅವುಗಳನ್ನು ಕೇಳುವುದಿಲ್ಲ ; ನಾನು ಎಂದಾದರೂ ಸೋಮಾರಿತನದಿಂದ ಹಾಸಿಗೆ ಪ್ರವೇಶಿಸಿ, ಮಲಗಿದರೆ ಮತ್ತು ವಿಶ್ರಾಂತಿ ಪಡೆದರೆ, ಆಗ ಹಾಗೇ ಮುಲುಗಿ ವಿಶ್ರಾಂತಿಸಿದ ಗಳಿಗೆಯು ನನ್ನ ಜೀವಿತದ ಕಡೆಯಾಗಲಿ ಎಂದು ಫೌಸ್ಟ್ ಸೈತಾನನಿಗೆ ಹೇಳಿದನು.

ಇಂದ್ರಿಯ ಆನಂದಕ್ಕೆ, ದೇಹದ ಇಚ್ಛೆ ತೃಪ್ತಿಗೆ, ಮಾನವನ ಅಮೂಲ್ಯ ಆತ್ಮ ದಬದಲು ಪಡೆಯುವುದಾಗಿತ್ತು ; ಫೌಸ್ಟ್ ತಿರಸ್ಕರಿಸಿದನು.

ಇದು 20 ನೇ ಶತಮಾನದ ಮಾನವನಿಗೆ ಸರಿಬೀಳುಲ್ಲ ! ಅವನು ಬಹಳ ಮುಂದುವರಿದಿದ್ದಾನೆ ; ಹೆಚ್ಚೆಚ್ಚು ಪ್ರಗತಿಗಾಗಿ ರಕ್ತ ಸುರಿಸುತ್ತಿದ್ದಾನೆ, ಬೆವರುತ್ತಿದ್ದಾನೆ ; ಸಾಗರೀಕತೆಯೂ ದಿನವೂ ಮುನ್ನುಗುತ್ತಿದೆ

ವುಡ್‌ಲಾಂಡ್ಸ್ 29 11 74 ರಿಂದ

ಅಮೋಘ 4 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೧೧ ಪ್ರದರ್ಶನಗಳು

ಅಪೆರಾ 29 11 74 ರಿಂದ

ಪಾತಾಳ ಭೈರವಿ

ಎನ್ ಟಿ ರಾಮರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ
ಅಮೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Quality Printing Neat Binding

Lakshminarasimha Press

Sivarampet, Mysore 1

Protect the Cow

Help The Gorakshana

— Humanitarian Propoganda Monthly—

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore